**ದಿನಾಂಕ : 19.03.2012 ರ ಸೋಮವಾರ ಪೂರ್ವಾಹ್ನ 11.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಸಜಿಲ್ ಕೃಷ್ಣ.ಪಿ. ರವರ ಅಧ್ಯಕ್ಷತೆಯಲ್ಲಿ ಕಛೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಸಾಮಾನ್ಯ ಸಭೆ ಹಾಗೂ 2012-13ನೇ ಸಾಲಿನ ಅಂದಾಜು ಆಯವ್ಯಯ(ಬಡ್ಜೆಟ್) ಮಂಡನಾ ಸಭೆಯ ನಡಾವಳಿ.**

| ಕ್ರ. ಸಂ | ಹಾಜರಿದ್ದ ಸದಸ್ಯರು | ಗೈರು ಹಾಜರಿದ್ದ ಸದಸ್ಯರು |
|---|---|---|
| 1. | ಶ್ರೀ ಸಜಿಲ್ ಕೃಷ್ಣ .ಪಿ ರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯ ರವರು, ಸದಸ್ಯರು<br>ವಿಧಾನ ಸಭಾ ಪತಿಗಳು ಹಾಗೂ ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 2. | ಮಾನ್ಯ ಶ್ರೀ ಎಂ.ಸಿ.ನಾಣಯ್ಯ ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | ಮಾನ್ಯ ಶ್ರೀ ಅಪ್ಪಚ್ಚುರಂಜನ್ ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. |
| 3. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | ಮಾನ್ಯ ಶ್ರೀ ಟಿ.ಜಾನ್ ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 4. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | ಮಾನ್ಯ ಜಿಲ್ಲಾಧಿಕಾರಿಯವರು, (ಪರವಾಗಿ) ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 5. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 6. | ಕಾರ್ಯಪಾಲಕ ಅಭಿಯಂತತರು ಸದಸ್ಯರು<br>ಕೆ.ಯು.ಡಬ್ಲ್ಯೂ.ಎಸ್ ಅಂಡ್ ಡಿ.ಬಿ, ಮೈಸೂರು. | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 7. | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಮೈಸೂರು. |
| 8. | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| 9. | ನಗರ ಯೋಜನಾ ಸದಸ್ಯರು, ಪ.ನಿ.ಸದಸ್ಯರು<br>ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ. | |
| 11. | ಶ್ರೀ ಅಶಾದ್ ಉರ್ ರೆಹೆಮಾನ್ ಷರೀಫ್ ಆಯುಕ್ತರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಪ್ರಾಧಿಕಾರದ ಸದಸ್ಯರುಗಳು ಹಾಗೂ ಆಹ್ವಾನಿತರುಗಳನ್ನು ಸಭೆಯುಲ್ಲಿ ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ (ದಿನಾಂಕ: 01.12.2011ರ ಸಭೆಯ) ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭೆಯ ನಡಾವಳಿಯನ್ನು ಓದಲಾಯಿತು, ಅದರಲ್ಲಿ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ವಿಧಾನ ಪರಿಷತ್ ಸದಸ್ಯರವರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯರವರು ಚರ್ಚಿಸುತ್ತಾ ಕೆ.ಟಿ.ಸಿ.ಪಿ ಕಾಯ್ದೆ ಕಲಂ 14(ಎ)ರಡಿ ಪತ್ರಿಕಾ ಪ್ರಕಟಣೆಯನ್ನು ನೀಡಿ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಿ, ಸ್ವೀಕರಿಸಿರುವ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಳ್ಳದೆ/ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಸಲ್ಲಿಸದೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ಮಾತ್ರ ಸರ್ಕಾರಕ್ಕೆ ಸಲ್ಲಿಸುತ್ತಿರುವುದು ಕಂಡುಬರುತ್ತಿದೆ. ಆಕ್ಷೇಪಣೆಗಳ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ನಗಣ್ಯಗೊಳಿಸುತ್ತಿರುವುದರಿಂದ ಪತ್ರಿಕಾ ಪ್ರಕಟಣೆಯನ್ನು ನೀಡುವ ಅವಶ್ಯಕತೆ ಇದೆಯೇ? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ಸಮಜಾಯಿಷಿಕೆಯನ್ನು ನೀಡುತ್ತಾ ಸ್ವೀಕರಿಸಿರುವ ಎಲ್ಲಾ ಅರ್ಜಿಗಳನ್ನು ಸಭೆಯಲ್ಲಿ ಓದಲಾಗುವುದು. ಹಾಗೂ ಸಭಾ ಅಭಿಪ್ರಾಯದೊಂದಿಗೆ ಸರ್ಕಾರವು ಕೋರಿರುವ ಟಿಪ್ಪಣಿಯಲ್ಲಿ ಆಕ್ಷೇಪಣೆಗಳ ಬಗ್ಗೆ ನಮೂದಿಸಿ, ಸಲ್ಲಿಸಲಾಗುತ್ತಿದೆ. ಈ ಬಗ್ಗೆ ಮಾಹಿತಿ ಏನಾದರೂ ಬೇಕಾದಲ್ಲಿ ಸರ್ಕಾರವೇ ಪ್ರಾಧಿಕಾರವನ್ನು ಕೋರುತ್ತಿತ್ತು. ಆದ್ದರಿಂದ ಈ ಬಗ್ಗೆ ಕ್ರಮವೇನು ಇರುವುದಿಲ್ಲವೆಂದು ತಿಳಿಸಿ ಹಿಂದಿನ ಸಭೆಯ ನಡಾವಳಿಯನ್ನು ಅಂಗೀಕರಿಸಲು ಅಭಿಪ್ರಾಯ ನೀಡಿದರು. ಅದರಂತೆ ದಿನಾಂಕ: 01.12.2012ರಲ್ಲಿ ನಡೆದ ಪ್ರಾಧಿಕಾರದ ಸಭೆಯ ನಡಾವಳಿಗಳಿಗೆ ಸಭೆಯು ಅಂಗೀಕಾರ ನೀಡಿತು.

**2) ವಿಷಯ ಸಂಖ್ಯೆ :2**

2011–12ನೇ ನವೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳ ವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1. | ಪರಿಶೀಲನಾ ಶುಲ್ಕ. | ರೂ. | 82,079.00 |
| 2. | ಕೆ.ಟಿ.ಸಿ.ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 2,82,660.00 |
| 3. | ಪತ್ರಿಕಾ ಪ್ರಕಟಣೆ ಶುಲ್ಕ | ರೂ. | 30,000.00 |
| 4. | ಪಾರ್ಕ್ ಮತ್ತು ಸಿ.ಎ.ನಿವೇಶನಕ್ಕೆ ವಿನಾಯಿತಿ ಶುಲ್ಕ | ರೂ. | 2,52,750.00 |
| 5. | ಬ್ಯಾಂಕ್ ಬಡ್ಡಿ | ರೂ. | 1,66,510.00 |
| 6. | ಇತರೆ ಮೂಲಗಳಿಂದ ಬಂದಿರುವ ಶುಲ್ಕ | ರೂ. | 920.00 |
| 7. | ಟೆಂಡರ್ ಸಲ್ಲಿಸಲು ಅರ್ಜಿ ಶುಲ್ಕ ಮತ್ತು ಠೇವಣಿ ಶುಲ್ಕ | ರೂ. | 53,240.00 |
| | **ಒಟ್ಟು ಜಮೆ** | **ರೂ.** | 8,68,159.00 |

**ಖರ್ಚು**

| | | | |
|---|---|---|---|
| 1. | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆ | ರೂ. | 1,23,257.00 |
| 2. | ಆಯುಕ್ತರ ವೇತನ ಮತ್ತು ಇತರೆ ಭತ್ಯೆಗಳು | ರೂ. | 1,13,700.00 |
| 3. | ಸಿಬ್ಬಂದಿ ವೇತನ | ರೂ. | 85,776.00 |
| 4. | ಕಂಪ್ಯೂಟರ್‌ಖರೀದಿ ಮತ್ತು ವೆಬ್ ಸೈಟ್ ಅಳವಡಿಕೆ/ನವೀಕರಣ ವೆಚ್ಚ (ಪ್ರಿಂಟರ್, ಫ್ಯಾಕ್ಸ್, ಯು.ಪಿ.ಎಸ್, ಬ್ಯಾಟರಿಮತ್ತು ಫ್ಯಾನ್ ಖರೀದಿ) | ರೂ. | 16,692.00 |

| | | | |
|---|---|---|---|
| 5. | ವಿದ್ಯುಚ್ಛಕ್ತಿ ದುರಸ್ಥಿ ಮತ್ತು ಬಿಲ್ ಪಾವತಿ ವೆಚ್ಚ | ರೂ. | 2,297.00 |
| 6. | ದೂರವಾಣಿ ವೆಚ್ಚ | ರೂ. | 8,501.00 |
| 7. | ವಾಹನ ಬಾಡಿಗೆ + ಇಂಧನ ವೆಚ್ಚ | ರೂ. | 77,942.00 |
| 8. | ಸ್ಟೇಶನರಿ ಖರೀದಿ ಮತ್ತು ಕಛೇರಿ ಸಾಧಿಲ್ವಾರು ವೆಚ್ಚ | ರೂ. | 2,000.00 |
| 9. | ಪತ್ರಿಕಾ ಪ್ರಕಟಣೆ ವೆಚ್ಚ | ರೂ. | 20,515.00 |
| 10. | ಆಯುಕ್ತರ ಪ್ರಯಾಣಭತ್ಯೆ ಬಿಲ್ ಪಾವತಿ | ರೂ. | 4,875.00 |
| 11. | ಮುದ್ರಣ ವೆಚ್ಚ | ರೂ. | 8,000.00 |
| 12. | ರಾಷ್ಟ್ರೀಯ ಹಬ್ಬಕ್ಕೆ ವಂತಿಕೆ ನೀಡಿರುವುದು. | ರೂ. | 2,000.00 |
| 13. | ಅಂಚೆ ಚೀಟಿ ಖರೀದಿ | ರೂ. | 1,000.00 |
| 14. | ಲೆಕ್ಕ ಪರಿಶೋಧನ ಶುಲ್ಕ ಪಾವತಿ | ರೂ. | 16,139.00 |
| 15. | ದಿನಪತ್ರಿಕೆ ಖರೀದಿ ವೆಚ್ಚ | ರೂ. | 775.00 |
| 16. | ಗದ್ದಿಗೆ ಉದ್ಯಾನವನ ನಿರ್ಮಾಣ ಅಭಿವೃದ್ಧಿ ಕಾರ್ಯಕ್ಕೆ ಆಗಿರುವ ಖರ್ಚು | ರೂ. | 29,63,023.00 |
| | **ಒಟ್ಟು ವೆಚ್ಚ** | ರೂ. | **34,46,492.00** |

**<u>ಘೋಷ್ವಾರೆ:</u>**

| | | | |
|---|---|---|---|
| 1. | ನವೆಂಬರ್ 2011ರ ಪ್ರಾರಂಭಿಕ ಶಿಲ್ಕು | ರೂ. | 39,63,268.00 |
| 2. | 2011–12ನೇ ನವೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳ ವರೆಗಿನ ಒಟ್ಟು ಜಮೆ | ರೂ. | 8,68,159.00 |
| 3. | ಒಟ್ಟು ಜಮೆ | ರೂ. | **48,31,427.00** |
| 4. | 2011–12ನೇ ನವೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳ ವರೆಗಿನ ಒಟ್ಟು ಖರ್ಚು | ರೂ. | 34,46,492.00 |
| 5. | 2012 ನೇ ಫೆಬ್ರವರಿ ತಿಂಗಳ ಆಖೈರು ಶಿಲ್ಕು | ರೂ. | 13,84,935.00 |
| 6. | ಠೇವಣಿ ಇಟ್ಟಿರುವುದು | ರೂ. | 30,00,000.00 |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–**ಮೇಲಿನ ಜಮಾ ಖರ್ಚುಗಳಿಗೆ ಸಭೆಯು ಅಂಗೀಕಾರ ನೀಡಿತು.

**<u>3) ವಿಷಯ ಸಂಖ್ಯೆ 3:– 2012–13ನೇ ಸಾಲಿನ ಅಂದಾಜು ಆಯವ್ಯಯ ಮಂಡನೆಯನ್ನು (ಬಡ್ಜೆಟ್) ಸಭೆಯಲ್ಲಿ ಅಂಗೀಕರಿಸುವ ಬಗ್ಗೆ.</u>**

**ಟಿಪ್ಪಣಿ:–** ಅಂದಾಜು ಆಯವ್ಯಯದ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| **ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ<br>2012–13ನೇ ಸಾಲಿನ ಅಂದಾಜು ಜಮೆಯ ವಿವರ ಆಯವ್ಯಯ (ಬಡ್ಜೆಟ್) ವಿವರ** | | | | | |
|---|---|---|---|---|---|
| **ಕ್ರ. ಸಂ** | **ಜಮೆಯ ವಿವರ** | **2009–10ನೇ ಸಾಲಿನ ಜಮೆ** | **2010–11ನೇ ಸಾಲಿನ ಜಮೆ** | **2011–12ನೇ ಸಾಲಿನ ಜಮೆ** | **2012–13ನೇ ಸಾಲಿನ ನಿರೀಕ್ಷಿತ ಜಮೆ** |
| 1. | ಪರಿಶೀಲನಾ ಶುಲ್ಕ | 36,43,545.00 | 3,50,000.00 | 2,87,382.00 | **4,00,000.00** |
| 2. | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18 ರಲ್ಲಿ ಸಂಗ್ರಹಿಸಲಾದ ಶುಲ್ಕ | 12,44,015.00 | 23,000.00 | 9,02,931.00 | **10,00,000.00** |

| | | | | | |
|---|---|---|---|---|---|
| 3. | ಅಭಿವೃದ್ಧಿ ಶುಲ್ಕ | 4,07,830.00 | - | - | **2,00,000.00** |
| 4. | ಪತ್ರಿಕಾ ಪ್ರಕಟಣೆ ನೀಡುವ ಸಲುವಾಗಿ ಸಂಗ್ರಹಿಸಲಾದ ಶುಲ್ಕ | 50,000.00 | 10,000.00 | 1,40,000.00 | **1,50,000.00** |
| 5. | ಠೇವಣಿಫಲಪ್ರದಗೊಂಡಿರುವುದು +ಬ್ಯಾಂಕ್ ಬಡ್ಡಿ | 32,556.00 | 50,000.00 | 38,60,753.00 | **60,00,000.00** |
| 6. | ದಂಡ ವಸೂಲಿ | 2,00,000.00 | - | 1,00,000.00 | **2,00,000.00** |
| 7. | ಖಾಸಗಿ ವಿನ್ಯಾಸ ಅನುಮೋದಿಸುವಾಗ ಪಾರ್ಕ್ ಮತ್ತು ಸಿ.ಎ. ನಿವೇಶನದಲ್ಲಿ ವಿನಾಯಿತಿ ನೀಡಿ ಬದಲಾಗಿ ಪಾವತಿಸಿಕೊಳ್ಳುವ ಶುಲ್ಕ | 3,71,500.00 | 25,48,000.00 | 63,24,703.00 | **70,00,000.00** |
| 8. | ಟೆಂಡರ್ ಫಾರಂ ಶುಲ್ಕ+ಟೆಂಡರ್ ಠೇವಣಿ ಶುಲ್ಕ | - | - | 1,74,040.00 | **2,00,000.00** |
| 9. | ಇತರೆ ಮೂಲಗಳಿಂದ ಬಂದ ಆದಾಯ | 8,384.00 | 3,000.00 | 3,036.00 | **10,000.00** |
| **ಒಟ್ಟು** | | **32,66,171.00** | **68,13,740.00** | **1,17,92,845.00** | **1,51,60,000.00** |

## 2012–13 ಸಾಲಿನ ಅಂದಾಜು ಖರ್ಚುಗಳ ವಿವರ

| ಕ್ರ. ಸಂ | ಖರ್ಚುಗಳ ವಿವರ | 2009–10ನೇ ಸಾಲಿನ ಖರ್ಚು | 2010–11ನೇ ಸಾಲಿನ ಖರ್ಚು | 2011–12ನೇ ಸಾಲಿನ ಖರ್ಚು | 2012–13ನೇ ಸಾಲಿನ ನಿರೀಕ್ಷಿತ ಖರ್ಚು |
|---|---|---|---|---|---|
| 1. | ಅಧ್ಯಕ್ಷರ ಗೌರವಧನ, ಇತರೆ ಭತ್ಯೆ | 1,61,366.00 | 1,83,870.00 | 2,85,384.00 | **3,50,000.00** |
| 2. | ಆಯುಕ್ತರ ವೇತನ ಮತ್ತು ಇತರ ಭತ್ಯೆಗಳು (ಪ್ರಭಾರ ಭತ್ಯೆ) | 2,64,955.00 | 3,04,797.00 | 3,16,698.00 | **5,00,000.00** |
| 3. | ಸಿಬ್ಬಂದಿ ವೇತನ | 1,33,006.00 | 1,60,000.00 | 2,48,364.00 | **3,50,000.00** |
| 4. | ದೂರವಾಣಿ ವೆಚ್ಚ | 30,050.00 | 24,000.00 | 24,458.00 | **50,000.00** |
| 5. | ವಿದ್ಯುಚ್ಛಕ್ತಿ ವೆಚ್ಚ | 2,704.00 | 15,500.00 | 9,938.00 | **20,000.00** |
| 6. | ಪತ್ರಿಕಾ ಪ್ರಕಟಣೆ ವೆಚ್ಚ | 28,732.00 | 6,496.00 | 1,24,420.00 | **1,50,000.00** |
| 7 | ದಿನಪತ್ರಿಕೆ ಖರೀದಿ ವೆಚ್ಚ | 1,200.00 | 1,200.00 | 2,220.00 | **10,000.00** |
| 8. | ಪ್ರಯಾಣ ಭತ್ಯೆ, ವರ್ಗಾವಣೆ ಪ್ರಯಾಣ ಭತ್ಯೆ | 13,487.00 | 7,550.00 | 8,070.00 | **20,000.00** |
| 9. | ಕಾರು ಬಾಡಿಗೆ ವೆಚ್ಚ + ಇಂಧನ ವೆಚ್ಚ | 6,273.00 | 2,000.00 | 1,03,732.00 | **2,50,000.00** |
| 10. | ಮುದ್ರಣ ವೆಚ್ಚ | 6,325.00 | 6,700.00 | 15,500.00 | **25,000.00** |
| 11. | ವಕೀಲರ ಶುಲ್ಕ ಪಾವತಿ | 300.00 | 1,000.00 | 1,000.00 | **20,000.00** |
| 12. | ಸ್ಟೇಶನರಿ ಖರೀದಿ ಮತ್ತು ಕಛೇರಿ ಸಾಧಿಲ್ವಾರು ವೆಚ್ಚ | 13,116.00 | 11,500.00 | 15,452.00 | **50,000.00** |
| 13. | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | 6,896.00 | 21,408.00 | 16,139.00 | **50,000.00** |
| 14. | ಕಟ್ಟಡ ದುರಸ್ಥಿ ವೆಚ್ಚ ಮತ್ತು ಪೀಠೋಪಕರಣಗಳ ಖರೀದಿ ವೆಚ್ಚ. | - | 1,30,991.00 | 1,38,261.00 | **6,00,000.00** |
| 15. | ರಾಷ್ಟ್ರೀಯ ಹಬ್ಬದ ವಂತಿಕೆ ಜಿಲ್ಲಾಧಿಕಾರಿಯವರಿಗೆ ಪಾವತಿ | 2,000.00 | 6,000.00 | 6,000.00 | **20,000.00** |
| 16. | ಸಭಾ ಉಪಾಹಾರ ವೆಚ್ಚ | 606.00 | 1,000.00 | 2,820.00 | **15,000.00** |

| | | | | | |
|---|---|---|---|---|---|
| 17. | ಅಂಚೆ ಚೀಟಿ ಖರೀದಿ | 1,500.00 | 1,000.00 | 2,500.00 | **5,000.00** |
| 18. | ಮಾಸ್ಟರ್ ಪ್ಲ್ಯಾನ್ ತಯಾರಿಸಲು ಹೊರ ಗುತ್ತಿಗೆ ನೀಡಿರುವ ಬಾಬ್ತು ಆಗುವ ವೆಚ್ಚ | - | 2,07,497.00 | 19,008.00 | **2,00,000.00** |
| 19 | ಕೆ.ಟಿ.ಸಿ.ಟಿ. ಕಾಯ್ದೆ ಕಲಂ 18ರಲ್ಲಿ ಸಂಗ್ರಹಿಸಲಾದ ಶುಲ್ಕದ ಶೇಕಡಾ 5 ನಗರಯೋಜನಾ ಮಂಡಳಿಗೆ ಪಾವತಿ | - | - | - | **2,00,000.00** |
| 20. | ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಸಲಕಣೆಗಳು, ಜೆರಾಕ್ಸ್ ಮಿಷನ್, ಯು.ಪಿ.ಎಸ್, ಪ್ರಿಂಟರ್ ಮತ್ತು ಫ್ಯಾಕ್ಸ್ ಮಿಷಿನ್ ಖರೀದಿ ವೆಚ್ಚ | - | 1,91,188.00 | 1,52,966.00 | **2,00,000.00** |
| 21. | ಟಿ.ಡಿ.ಎಸ್. ಪಾವತಿ | - | 17,550.00 | 4,22,419.00 | **3,00,000.00** |
| 22. | ಗದ್ದಿಗೆಯಲ್ಲಿ ಉದ್ಯಾನವನ ಅಭಿವೃದ್ಧಿ ಪಡಿಸಲು ಆಗಿರುವ ವೆಚ್ಚ | - | - | 63,49,634.00 | **30,00,000.00** |
| 23 | ಅಭಿವೃದ್ಧಿ ಪಡಿಸಿರುವ ಉದ್ಯಾನವನವನ್ನು ನಿರ್ವಹಿಸುವುದು, ವಿದ್ಯುತ್‌ಚ್ಛಕ್ತಿ ವೆಚ್ಚ ಮತ್ತು ಮೋಟಾರ್ ನಿರ್ವಹಣೆ/ದುರಸ್ಥಿಗೆ ಆಗುವ ಅಂದಾಜು ವೆಚ್ಚ | | | - | **8,50,000.00** |
| 24 | ಕರ್ನಾಟಕ ಮುನಿಸಿಪಾಲ್ ಡೇಟಾ ಸೊಸೈಟಿಗೆ ವೆಬ್‌ಸೈಟ್ ಅಳವಡಿಸಲು ನೋಂದಣಿ ಶುಲ್ಕ ಮತ್ತು ವಾರ್ಷಿಕ ಶುಲ್ಕ | - | - | - | **3,00,000.00** |
| 25 | ಇತರೆ ವೆಚ್ಚ | 2,572.00 | 200.00 | 328.00 | **20,000.00** |
| **ಒಟ್ಟು** | | **19,30,315.00** | **13,01,447.00** | **82,65,311.00** | **75,55,000.00** |

**ಘೋಶ್ವಾರೆ:**

| | | | |
|---|---|---|---|
| **2012–2013ನೇ ಸಾಲಿನ ಅಂದಾಜು ಆಯವ್ಯಯ ಘೋಶ್ವಾರೆ** | | | |
| 1. | 2012–13ನೇ ಸಾಲಿನ (ಏಪ್ರಿಲ್2012) ಆರಂಭಿಕ ಶಿಲ್ಕು | ರೂ. | 12,51,638.00 |
| 2. | 2012–2013ನೇ ಸಾಲಿನ ಅಂದಾಜು ಜಮೆ | ರೂ. | 1,51,60,000.00 |
| 3. | 2012–2013ನೇ ಸಾಲಿನ ಅಂದಾಜು ಒಟ್ಟು ಜಮೆ | ರೂ. | 1,64,11,638.00 |
| 4. | 2012–2013ನೇ ಸಾಲಿನ ಅಂದಾಜು ವೆಚ್ಚ | ರೂ. | 75,55,000.00 |
| 5. | 2012–2013ನೇ ಸಾಲಿನ (31.03.2013ರ ಅಂತ್ಯಕ್ಕೆ) ಅಂದಾಜು ಅಖೈರು ಶಿಲ್ಕು | ರೂ. | 88,56,638.00 |

ಈ ಮೇಲಿನ ಅಂದಾಜು ಆಯವ್ಯಯ (ಬಡ್ಜೆಟ್ ಮಂಡನೆ)ಯನ್ನು ಸಭಾ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** 2012–13ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಗೆ ಸಭೆಯು ಸರ್ವಾನುಮತದ ಆಡಳಿತಾತ್ಮಕ ಅಂಗೀಕಾರ ನೀಡಿ ಸಕ್ಷಮ ಪ್ರಾಧಿಕಾರದಿಂದ (ಮಾನ್ಯ ಜಿಲ್ಲಾಧಿಕಾರಿಯವರು) ಮಂಜೂರಾತಿ ಪಡೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

**4) ವಿಷಯ ಸಂಖ್ಯೆ 4:– ಕರ್ನಾಟಕ ಮುನಿಸಿಪಾಲ್ ಡಾಟಾ ಸೊಸೈಟಿಗೆ ಶುಲ್ಕ ಪಾವತಿಸುವ ಬಗ್ಗೆ.**

**ಟಿಪ್ಪಣಿ:–**ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ(ಕೆ.ಎಂ.ಡಿ.ಎಸ್)ಯಿಂದ ರಚಿತವಾಗುತ್ತಿರುವ ವೆಬ್‌ಸೈಟ್‌ಗಳಲ್ಲಿ ವಿವರಗಳನ್ನು ಅಳವಡಿಸಿಕೊಳ್ಳಲು ಒಂದು ಸಲ ಸದಸ್ಯತ್ವ ನೋಂದಣಿ ಶುಲ್ಕ (one time membership fees) ಮತ್ತು ವಾರ್ಷಿಕ ವರದಿಗೆ ವಂತಿಕೆಗಳನ್ನು 2007–08ನೇ ಸಾಲಿನಿಂದ ಈ ಕೆಳಕಂಡಂತೆ ಪ್ರಾಧಿಕಾರದಿಂದ ಪಾವತಿಸಲು ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ(ಕೆ.ಎಂ.ಡಿ.ಎಸ್), ಬೆಂಗಳೂರುರವರು ಕೋರಿರುತ್ತಾರೆ.

**ಶುಲ್ಕದ ವಿವರ**

| Particulars | F.Y | Rs. | Rs. |
|---|---|---|---|
| One timeMembership fees | | | 2,00,000 |
| Annual Subcription fees | 2007-08 | 20000 | 1,20,000 |
| | 2008-09 | 20000 | |
| | 2009-10 | 20000 | |
| | 2010-11 | 20000 | |
| | 2011-12 | 40000 | |
| **Total** | | | **3,20,000** |

ಪ್ರಸ್ತಾವನೆಯನ್ನು ಸಭೆಯಲ್ಲಿ ಚರ್ಚಿಸಲು ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿಯು ಆ ಸಂಧರ್ಭದಲ್ಲಿ ದುರ್ಬಲವಾಗಿದ್ದ ಕಾರಣ ಒನ್ ಟೈಮ್ ಮೆಂಬರ್‌ಶಿಪ್ ಶುಲ್ಕ ಹಾಗೂ 2008ನೇ ಸಾಲಿನಿಂದ 2010ನೇ ಸಾಲಿನವರೆಗೆ ಶುಲ್ಕವನ್ನು ಪಾವತಿಸಲು ಸಾಧ್ಯವಿರುವುದಿಲ್ಲವೆಂದು ಹಾಗೂ 2011–12ನೇ ಸಾಲಿಗೆ ವಾರ್ಷಿಕ ವರದಿಗೆ ರೂ.40,000/– ಮಾತ್ರವನ್ನು ಪಾವತಿಸಬಹುದಾಗಿರುತ್ತದೆ ಎಂದು ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಅಭಿಪ್ರಾಯ ನೀಡಿದರು. ಇದಕ್ಕೆ ಸಭೆಯು ಬಹುಮತದ ಅಂಗೀಕಾರವನ್ನು ನೀಡಿ ವಾರ್ಷಿಕ ನಿರ್ವಹಣೆ ಶುಲ್ಕ ಪಾವತಿಸುವ ಬಗ್ಗೆ ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ(ಕೆ.ಎಂ.ಡಿ.ಎಸ್), ಬೆಂಗಳೂರು ರವರಿಗೆ ಪತ್ರ ಬರೆದು ವಾರ್ಷಿಕ ವಂತಿಕೆ ನೀಡಲು ಮಾಹಿತಿ ಪಡೆದುಕೊಂಡು ಅದರಂತೆ ಪಾವತಿಸಲು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**5) ವಿಷಯ ಸಂಖ್ಯೆ 5:– ಗದ್ದಿಗೆಯಲ್ಲಿ ಅಭಿವೃದ್ಧಿ ಪಡಿಸಿರುವ ಉದ್ಯಾನವನವನ್ನು ವಾರ್ಷಿವಾಗಿ ನಿರ್ವಹಿಸಲು ಆಗುವ ನಿರ್ವಹಣಾ ವೆಚ್ಚಕ್ಕೆ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳುವ ಬಗ್ಗೆ.**

**ಟಿಪ್ಪಣಿ:–**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಡಿಕೇರಿ ನಗರದ ಗದ್ದಿಗೆ ವ್ಯಾಪ್ತಿಯ ಅಂದಾಜು 5.00ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಉದ್ಯಾನವನವನ್ನು ಅಭಿವೃದ್ಧಿ ಪಡಿಸಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಇದನ್ನು ನಿರ್ವಹಣೆ ಮಾಡುವುದು, ಇದಕ್ಕೆ ಆಗುವ ವಿದ್ಯುತ್‌ಚ್ಛಕ್ತಿ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸುವುದು, ಮೋಟಾರ್ ರಿಪೇರಿ ಇನ್ನಿತರ ಅಗತ್ಯ ಕೆಲಸವನ್ನು

ನಿರ್ವಹಿಸಲು ವಾರ್ಷಿಕ ನಿರ್ವಹಣೆಗೆ ರೂ.8,50,000.00 ಆಗಬಹುದೆಂದು ಅಂದಾಜಿಸಲಾಗಿದೆ. ಆದ್ದರಿಂದ ಉದ್ಯಾನವನ ನಿರ್ವಹಣೆಗೆ ವಾರ್ಷಿಕ ವೆಚ್ಚ ಅಂದಾಜು ರೂ.8,50,000.00ಕ್ಕೆ ಸಭಾ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

**ನಿರ್ಣಯ:–**ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಗದ್ದಿಗೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿರುವ ಉದ್ಯಾನವನದ ಎಲ್ಲಾ ಕಾಮಗಾರಿಯು ಪೂರ್ಣಗೊಂಡಿದ್ದು, ಗುತ್ತಿಗೆದಾರರಾದ ಮೆ॥ಗ್ರೀನ್‌ಸ್ಪೇಸ್, ಲ್ಯಾಂಡ್‌ಸ್ಕೇಪ್ಸ್ ಇಂಡಿಯಾ ಪ್ರೈ.ಲಿ, ಬೆಂಗಳೂರುರವರು ಏಪ್ರಿಲ್–2012ರವರೆಗೆ ನಿರ್ವಹಿಸುತ್ತಿದ್ದಾರೆ. ತದನಂತರ ಪ್ರಾಧಿಕಾರದಿಂದ ಒಂದು ವರ್ಷದ ಅವಧಿಯವರೆಗೆ ಉದ್ಯಾನವನವನ್ನು ನಿರ್ವಹಿಸಲು ಟೆಂಡರ್ ಕರೆದು ಗುತ್ತಿಗೆ ನೀಡಲಾಗುವುದು ಮತ್ತು ಮುಂದಿನ ದಿನಗಳಲ್ಲಿ ಯಾರಾದರೂ ಆಸಕ್ತಿಯುಳ್ಳ ಖಾಸಗಿ ಸಂಸ್ಥೆ/ವ್ಯಕ್ತಿಗಳು ಉದ್ಯಾನವನವನ್ನು ನಿರ್ವಹಿಸಲು ಇಚ್ಛಿಸಿದಲ್ಲಿ ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿಕೊಂಡು ಗುತ್ತಿಗೆಯನ್ನು ನೀಡಬಹುದೆಂದು ಸಭೆಯಲ್ಲಿ ಆಯುಕ್ತರು ವಿವರಣೆಯನ್ನು ನೀಡಿದರು ಹಾಗೂ ಪ್ರಾಧಿಕಾರವು ಉದ್ಯಾನವನವನ್ನು ನಿರ್ವಹಿಸುವ ಸಮಯದಲ್ಲಿ ಪ್ರವಾಸಿಗರು/ಸಾರ್ವಜನಿಕರಿಂದ ಪ್ರವೇಶ ಶುಲ್ಕ ರೂ.5/– ರಂತೆ ನಿಗಧಿಪಡಿಸಿ, ಶುಲ್ಕ ಪಾವತಿಸಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿ, ಸಭೆಯ ಅಭಿಪ್ರಾಯವನ್ನು ಕೋರಿದರು. ಇದಕ್ಕೆ ಸರ್ವ ಸದಸ್ಯರು ಒಪ್ಪಿ ಶುಲ್ಕ ವಸೂಲಿ ಮಾಡಬಹುದೆಂದು ಹಾಗೂ ವಾಹನ ನಿಲುಗಡೆಗೆ (ಪಾರ್ಕಿಂಗ್ ವ್ಯವಸ್ಥೆ) ಗದ್ದಿಗೆ ವ್ಯಾಪ್ತಿಯಲ್ಲಿ ಸ್ಥಳವಕಾಶ ಮಾಡಲು ತಿಳಿಸಿದರು. ಈ ಮಾಹಿತಿಯನ್ನು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರುರವರಿಗೆ ಪತ್ರ ಬರೆದು ತಿಳಿಸುವಂತೆ ಸಭೆಯಲ್ಲಿ ಸರ್ವಾನುಮತದ ಅಂಗೀಕಾರ ನೀಡಿ, ಆಯುಕ್ತರಿಗೆ ಅಧಿಕಾರ ನೀಡಲಾಯಿತು. ಹಾಗೂ ವಾರ್ಷಿಕ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿತು .

**6) ವಿಷಯ ಸಂಖ್ಯೆ 6:– ಅರ್ಜಿದಾರರು ಶ್ರೀ ಬಿ.ವೈ.ರಾಜೇಶ್**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ.246 ರ 5.25ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 1.00ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಅರ್ಜಿದಾರರಾದ ಶ್ರೀ ಬಿ.ವೈ.ರಾಜೇಶ್ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ಉತ್ತರದಲ್ಲಿ 4.00ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಜಾಗದ ಸುತ್ತಮುತ್ತ ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಮಡಿಕೇರಿ ನಗರವನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಈ ನಗರಕ್ಕೆ ಆಗಮಿಸುವ ಪ್ರವಾಸಿಗರ ಅಗತ್ಯತೆಗಳನ್ನು ಪೂರೈಸುವ (ವಸತಿ ಹಾಗೂ ಊಟದ ವ್ಯವಸ್ಥೆ) ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಸ್ತಾವಿತ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವರು.

ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–**ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ಉತ್ತರದಲ್ಲಿ 4.00ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸಮೀಪದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತವೆ ಎಂದು ಅಭಿಪ್ರಾಯಿಸಿದರು. ಪ್ರಸ್ತಾವನೆಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–**ಸದರಿ ಪ್ರಕರಣದ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಸರ್ಕಾರದ ಪತ್ರ ಸಂಖ್ಯೆ: ನಅಇ/609/ಮೈಅಪ್ರಾ/2011, ದಿನಾಂಕ:27.01.2012ರಲ್ಲಿ ಮಡಿಕೇರಿ ನಗರದ ಮಹಾಯೋಜನೆಯು(ಪ–1) ಪರಿಷ್ಕರಣೆ ಹಂತದಲ್ಲಿರುವುದರಿಂದ ಭೂ ಉಪಯೋಗ ಬದಲಾವಣೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವಲ್ಲವೆಂದು ಹಾಗೂ ಮಡಿಕೇರಿಗೆ ಕ್ಯಾರಿಯಿಂಗ್ ಕೆಪ್ಯಸಿಟಿ ಇಲ್ಲದಿರುವುದರಿಂದ ನಗರದ ಕೃಷಿ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಬದಲಾವಣೆ ಮಾಡಿರುವ ಎಲ್ಲಾ ಪ್ರಕರಣವನ್ನು ತಿರಸ್ಕರಿಸಬಹುದೆಂದು ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯರವರು ವಿರೋಧ ವ್ಯಕ್ತಪಡಿಸಿರುತ್ತಾರೆ. ಇದಕ್ಕೆ ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯಿಂದ ಸ್ವೀಕರಿಸಿರುವ ಮಾಹಿತಿಯಂತೆ ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ಆಗಮಿಸುತ್ತಿರುವ ಪ್ರವಾಸಿಗರ ಅಂಕಿ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡುತ್ತಾ 2009ನೇ ಸಾಲಿಗೆ 55,588, 2010ನೇ ಸಾಲಿಗೆ 5,94,467 ಮತ್ತು 2011–12ನೇ ಸಾಲಿಗೆ 18,16,257 ಪ್ರವಾಸಿಗರು ಆಗಮಿಸಿದ್ದು, ಇವರುಗಳಿಗೆಲ್ಲ ಊಟ–ವಸತಿ ವ್ಯವಸ್ಥೆಗಳನ್ನು ಒದಗಿಸಿಕೊಡಲು ರೆಸಾರ್ಟ್‌ಗಳ ಅವಶ್ಯಕತೆ ತುಂಬಾ ಇರುವುದರಿಂದ ಬಂದಿರುವ ಆಕ್ಷೇಪಣೆಗಳನ್ನು ನಗಣ್ಯಗೊಳಿಸಿ ಕೃಷಿ ಜಮೀನುಗಳನ್ನು ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವುದು ಸೂಕ್ತವೆಂದು ತಿಳಿಸಿ, ಮಹಾಯೋಜನೆಯು ಪರಿಶೀಲನೆಯ ಹಂತದಲ್ಲಿರುವುದರಿಂದ ತುಂಡು ತುಂಡು ಜಮೀನುಗಳನ್ನು ವಿವಿಧ ಉಪಯೋಗಕ್ಕೆ ಕಾಯ್ದಿರಿಸಿ ಸರ್ಕಾರಕ್ಕೆ ಅನುಮೋದನೆಗೆ ಕಳುಹಿಸುವುದರಿಂದ ಪರಿಷ್ಕರಣೆ ಹಂತದಲ್ಲಿರುವ ಮಹಾಯೋಜನೆಗೆ ಧಕ್ಕೆಯಾಗುತ್ತದೆ ಎಂದು ಸರ್ಕಾರದಿಂದ ತಿಳಿಸಿರುವುದರಿಂದ ಈಗಾಗಲೇ ಸರ್ಕಾರದ ಪತ್ರ ಸಂಖ್ಯೆ ನಅಇ/265/ಮೈಅಪ್ರಾ/2011, ದಿನಾಂಕ: 21.02.2012ರಂತೆ ಮಹಾಯೋಜನೆಯನ್ನು ಮತ್ತೆ ಪರಿಷ್ಕರಿಸಿ ಕಳುಹಿಸಲು ಪ್ರಾಧಿಕಾರಕ್ಕೆ ಸಲ್ಲಿಸಿರುವುದರಿಂದ ಸದರಿ ಭೂ ಉಪಯೋಗ ಬದಲಾವಣೆ ಕೋರಿರುವ ಎಲ್ಲಾ ಪ್ರಕರಣಗಳನ್ನು ಮಹಾಯೋಜನೆಯಲ್ಲಿ ಅಳವಡಿಸಿಕೊಳ್ಳುವುದು ಸೂಕ್ತವೆಂದು ತಿಳಿಸಿದರು. ಇದಕ್ಕೆ ಸಭೆಯು ಬಹುಮತದ ಅಂಗೀಕಾರ ನೀಡಿತು.

**7) ವಿಷಯ ಸಂಖ್ಯೆ 7:– ಅರ್ಜಿದಾರರು ಶ್ರೀ ಮಾಫಿಲ್ ಬಡುವ ಬಶೀರ್, ಶ್ರೀ ಶ್ಯಾಮ್ ಪುಲ್ಲೊಲ್ಲಿ ಅಹ್ಮದ್ ಮತ್ತು ಶ್ರೀ ಪುಲ್ಲೊಲ್ಲಿ ಅಹ್ಮದ್ ಶಾಹೀದ್.**

ಮಡಿಕೇರಿ ನಗರಸಭಾ ಬ್ಲಾಕ್ ನಂಬರು 11ರ ಸರ್ವೆ ನಂಬರು132/ಎ ರಲ್ಲಿರುವ 0.20ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಅರ್ಜಿದಾರರಾದ ಶ್ರೀ ಮಾಪಿಲ್ ಬಡುವ ಬಶೀರ್, ಶ್ರೀ ಶ್ಯಾಮ್ ಪುಲ್ಲೊಲ್ಲಿ ಅಹ್ಮದ್ ಮತ್ತು ಶ್ರೀ ಪುಲ್ಲೊಲ್ಲಿ ಅಹ್ಮದ್ ಶಾಹೀದ್ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–**ಪ್ರಸ್ತಾವಿತ ಜಾಗವು ಮಡಿಕೇರಿ ನಗರಸಭಾ ವ್ಯಾಪ್ತಿಯ ಬ್ಲಾಕ್ ನಂ.11ರಲ್ಲಿದ್ದು, ಅನುಮೋದಿತ ಮಹಾ ಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತದೆ. ಉತ್ತರದಲ್ಲಿ 8.00ಮೀ ಹಾಗೂ ಪೂರ್ವದಲ್ಲಿ 6.00ಮೀ ಅಗಲದ ರಸ್ತೆಗಳಿಂದ ಸಂಪರ್ಕವನ್ನು ಹೊಂದಿದ್ದು, ಸುತ್ತಮುತ್ತ ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿರುತ್ತವೆ. ಸುತ್ತಮುತ್ತಲಿನ ಸಾರ್ವಜನಿಕರಿಗೆ ವಾಣಿಜ್ಯ ಚಟುವಟಿಕೆಗಳಿಗೆ ಪೂರಕವಾಗಿ ಅನುಕೂಲವಾಗುವ ಮತ್ತು ಸ್ಥಳೀಯರಿಗೆ ಉದ್ಯೋಗವಾಕಾಶ ನೀಡುವ ಸಾರ್ವಜನಿಕ ಹಿತದೃಷ್ಟಿಯಿಂದ ಭೂ ಉಪಯೋಗ ಬದಲಾವಣೆಗೆ ಅರ್ಜಿದಾರರು ಕೋರಿರುವರು .

ಸದರಿ ಜಾಗವನ್ನು ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–**ಪ್ರಸ್ತಾವಿತ ಜಾಗವು ಮಡಿಕೇರಿ ನಗರಸಭಾ ವ್ಯಾಪ್ತಿಯ ಬ್ಲಾಕ್ ನಂ.11ರಲ್ಲಿದ್ದು, ಅನುಮೋದಿತ ಮಹಾ ಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತದೆ. ಉತ್ತರದಲ್ಲಿ 8.00ಮೀ ಹಾಗೂ ಪೂರ್ವದಲ್ಲಿ 6.00ಮೀ ಅಗಲದ

ರಸ್ತೆಗಳಿಂದ ಸಂಪರ್ಕವನ್ನು ಹೊಂದಿದ್ದು, ಸುತ್ತಮುತ್ತ ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉಪಯೋಗಕ್ಕೆ ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯಿಸಿದರು. ಪ್ರಸ್ತಾವನೆಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ವಿಷಯ ಸಂಖ್ಯೆ 6ರ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಿತು.

**8) ವಿಷಯ ಸಂಖ್ಯೆ 8:– ಅರ್ಜಿದಾರರು ಶ್ರೀ ಕೆ.ಆರ್.ರವಿಕಿರಣ್.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ಬಾಡಗ ಗ್ರಾಮದ ಸರ್ವೆ ನಂ.25/4 ರಲ್ಲಿನ ಒಟ್ಟು 0.10ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಾಣಕ್ಕೆ) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿ ಶ್ರೀ ಕೆ.ಆರ್.ರವಿಕಿರಣ್ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ದಕ್ಷಿಣದಲ್ಲಿ 8.80ಮೀ ಅಗಲದ ಮಡಿಕೇರಿಯಿಂದ ಗಾಳಿಬೀಡಿಗೆ ಹಾದು ಹೋಗುವ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಹಾಗೂ ಪೂರ್ವದಲ್ಲಿ 4.40ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳನ್ನು ಹಾಗೂ ಸ್ಥಳೀಯ ಜನರಿಗೆ ನೌಕರಿಯನ್ನು ಒದಗಿಸುವ ಸಾರ್ವಜನಿಕರ ಹಿತದೃಷ್ಟಿಯನ್ನು ಪರಿಗಣಿಸಿ, ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಾಣಕ್ಕೆ) ಭೂ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವರು.

ಸದರಿ ಜಾಗವನ್ನು ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ದಕ್ಷಿಣದಲ್ಲಿ 8.80ಮೀ ಅಗಲದ ಮಡಿಕೇರಿಯಿಂದ ಗಾಳಿಬೀಡಿಗೆ ಹಾದು ಹೋಗುವ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಹಾಗೂ ಪೂರ್ವದಲ್ಲಿ 4.40ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗದ ಸುತ್ತಮುತ್ತ ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ ಎಂದು ಅಭಿಪ್ರಾಯಿಸಿದರು. ಪ್ರಸ್ತಾವನೆಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ವಿಷಯ ಸಂಖ್ಯೆ 6ರ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಿತು.

**9) ವಿಷಯ ಸಂಖ್ಯೆ 9:– ಅರ್ಜಿದಾರರು ಶ್ರೀ ಹೆಚ್.ಎನ್.ಪೃಥ್ವಿನಾರಾಯಣ್.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರು 543/75ರಲ್ಲಿನ 1.95ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೊಟೇಲ್ ಮತ್ತು ಅಂಗಡಿ ಮಳಿಗೆಗಳು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿ ಶ್ರೀ ಹೆಚ್.ಎನ್.ಪೃಥ್ವಿನಾರಾಯಣ್ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿದ್ದು, ವಸತಿ ವಲಯದಲ್ಲಿ ಬರುತ್ತದೆ. ದಕ್ಷಿಣದಲ್ಲಿ 6.30ಮೀ ಅಗಲದ ಟಾರ್ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುತ್ತವೆ. ಹೊಟೇಲ್ ಮತ್ತು ಅಂಗಡಿ ಮಳಿಗೆಗಳನ್ನು ನಿರ್ಮಿಸಸುವುದರಿಂದ ಸ್ಥಳೀಯರಿಗೆ ಉದ್ಯೋಗ ಅವಕಾಶ, ಸುತ್ತಮುತ್ತಲಿನ ಸಾರ್ವಜನಿಕರಿಗೆ ಹಾಗೂ ನಗರಕ್ಕೆ ಆಗಮಿಸುವ ಪ್ರವಾಸಿಗರಿಗೆ ವಾಣಿಜ್ಯ ಚಟುವಟಿಕೆಗಳಿಗೆ ಪೂರಕವಾಗುವ ಹಿತದೃಷ್ಟಿಯನ್ನು ಪರಿಗಣಿಸಿ, ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಕೋರಿರುವರು.

ಸದರಿ ಜಾಗವನ್ನು ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ದಿನಾಂಕ: 24.02.2012ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಸಿ.ನಾಣಯ್ಯರವರಿಂದಲೂ ಹಾಗೂ ದಿನಾಂಕ:27.02.2012ರಂದು ಸಾರ್ವಜನಿಕರಿಂದಲೂ 1 ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುತ್ತದೆ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿದ್ದು, ವಸತಿ ವಲಯದಲ್ಲಿ ಬರುತ್ತದೆ. ದಕ್ಷಿಣದಲ್ಲಿ 6.30ಮೀ ಅಗಲದ ಟಾರ್ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುತ್ತವೆ. ಸದರಿ ಜಾಗವು ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಆದರೆ ದಿನಾಂಕ:25.01.2012ರ ಸರ್ಕಾರದ ಪತ್ರ ಸಂಖ್ಯೆ: ನಅಇ/609/ಮೈಅಪ್ರಾ/2011ರಂತೆ ಮಹಾಯೋಜನೆಯನ್ನು ಪರಿಷ್ಕರಿಸುವಾಗ ಭೂ ಉಪಯೋಗ ಬದಲಾವಣೆಗೆ ಪ್ರಸ್ತಾವನೆ ಸಲ್ಲಿಸಬಾರದೆಂದು ನಿರ್ದೇಶನ ನೀಡಲಾಗಿರುವುದರಿಂದ ಅದರಂತೆ ಕ್ರಮ ಕೈಗೊಳ್ಳಬಹುದೆಂದು ಅಭಿಪ್ರಾಯ ನೀಡಿರುತ್ತಾರೆ. ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಗಿದೆ.

**ನಿರ್ಣಯ:–** ವಿಷಯ ಸಂಖ್ಯೆ 6ರ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಿತು.

**10) ವಿಷಯ ಸಂಖ್ಯೆ 10:– ಅರ್ಜಿದಾರರು ಶ್ರೀ ಸಿ.ಕೆ.ವಿಜಯನ್ ಹಾಗೂ ವೆರೋನಿಕ್ ವಿಜಯನ್.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ಬಾಡಗ ಗ್ರಾಮದ ಸರ್ವೆ ನಂ.53/2 ರಲ್ಲಿನ ಒಟ್ಟು 1.52ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಹೋಂ ಸ್ಟೇ ನಿರ್ಮಾಣಕ್ಕೆ) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿ ಶ್ರೀ ಸಿ.ಕೆ.ವಿಜಯನ್ ಹಾಗೂ ವೆರೋನಿಕ್ ವಿಜಯನ್ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಅರಣ್ಯ ವಲಯದಲ್ಲಿ ಬರುತ್ತದೆ. ಹಾಗೂ ದಕ್ಷಿಣದಲ್ಲಿ 7.30ಮೀ ಅಗಲದ ಮಡಿಕೇರಿಯಿಂದ ಅಬ್ಬಿಫಾಲ್ಸ್‌ಗೆ ಹಾದು ಹೋಗುವ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಮಡಿಕೇರಿ ನಗರವನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಈ ನಗರಕ್ಕೆ ಆಗಮಿಸುವ ಪ್ರವಾಸಿಗರ ಅಗತ್ಯತೆಗಳನ್ನು ಪೂರೈಸುವ (ವಸತಿ ಹಾಗೂ ಊಟದ ವ್ಯವಸ್ಥೆ) ಸಾರ್ವಜನಿಕ ಹಿತಾಸಕ್ತಿಯಿಂದಲೂ ಪ್ರಸ್ತಾವಿತ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುತ್ತಾರೆ.

ಸದರಿ ಜಾಗವನ್ನು ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ದಿನಾಂಕ: 24.02.2012ರಂದು ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಸಿ.ನಾಣಯ್ಯರವರಿಂದಲೂ ಹಾಗೂ ದಿನಾಂಕ:27.02.2012ರಂದು ಸಾರ್ವಜನಿಕರಿಂದಲೂ 1 ಆಕ್ಷೇಪಣೆ ಅರ್ಜಿಗಳು ಸ್ವೀಕೃತವಾಗಿರುತ್ತದೆ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಅರಣ್ಯ ವಲಯದಲ್ಲಿ ಬರುತ್ತದೆ. ಹಾಗೂ ದಕ್ಷಿಣದಲ್ಲಿ 7.30ಮೀ ಅಗಲದ ಮಡಿಕೇರಿಯಿಂದ ಅಬ್ಬಿಫಾಲ್ಸ್‌ಗೆ ಹಾದು ಹೋಗುವ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಪ್ರಸ್ತುತ ಮಡಿಕೇರಿ ನಗರದ ಪರಿಷ್ಕೃತ ತಾತ್ಕಾಲಿಕ ಮಹಾಯೋಜನೆ ಸರ್ಕಾರದ ಪರಿಶೀಲನೆ ಹಂತದಲ್ಲಿರುವುದರಿಂದ ಸರ್ಕಾರದ ಪತ್ರದಂತೆ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಅಭಿಪ್ರಾಯ ನೀಡಿದರು. ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಗಿದೆ.

**ನಿರ್ಣಯ:–** ವಿಷಯ ಸಂಖ್ಯೆ 6ರ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಿತು.

**11) ವಿಷಯ ಸಂಖ್ಯೆ 11:– ಅರ್ಜಿದಾರರು ಶ್ರೀ ಬಿ.ಎ.ಮಹಾಬಲ ಮತ್ತು ಶ್ರೀಮತಿ ಬಿ.ಬಿ.ಲತಾಕುಮಾರಿ.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ನಗರಸಭಾ ಬ್ಲಾಕ್ ನಂ.24ರ ಸರ್ವೆ ನಂ.99/7ರಲ್ಲಿನ ಒಟ್ಟು 0.20ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ವಾಣಿಜ್ಯ ಸಂಕೀರ್ಣ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿ ಶ್ರೀ ಬಿ.ಎ.ಮಹಾಬಲ ಮತ್ತು ಶ್ರೀಮತಿ ಬಿ.ಬಿ.ಲತಾಕುಮಾರಿ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ನಗರಸಭಾ ವ್ಯಾಪ್ತಿಯ ಹೊರಭಾಗದಲ್ಲಿದ್ದು, ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ನಿವೇಶನದ ಪೂರ್ವಕ್ಕೆ 10.00ಮೀ ಅಗಲದ ಮಡಿಕೇರಿ ಸೋಮವಾರಪೇಟೆ ರಾಜ್ಯ ಹೆದ್ದಾರಿಯಿಂದ ಮತ್ತು ಪಶ್ಚಿಮಕ್ಕೆ 3.00ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸುತ್ತಮುತ್ತಲಿನ ಸಾರ್ವಜನಿಕರಿಗೆ ಅಂಗಡಿ ಸೌಲಭ್ಯಗಳನ್ನು ಒದಗಿಸಲು ಮತ್ತು ಸ್ಥಳೀಯರಿಗೆ ಉದ್ಯೋಗವಕಾಶ ನೀಡುವ ಸಾರ್ವಜನಿಕ ಹಿತದೃಷ್ಟಿಯಿಂದ ವಾಣಿಜ್ಯ ಉದ್ದೇಶಕ್ಕೆ (ವಾಣಿಜ್ಯ ಸಂಕೀರ್ಣ ನಿರ್ಮಿಸಲು) ಭೂ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವರು.

ಸದರಿ ಜಾಗವನ್ನು ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ನಗರಸಭಾ ವ್ಯಾಪ್ತಿಯ ಹೊರಭಾಗದಲ್ಲಿದ್ದು, ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ನಿವೇಶನದ ಪೂರ್ವಕ್ಕೆ 10.00ಮೀ ಅಗಲದ ಮಡಿಕೇರಿ ಸೋಮವಾರಪೇಟೆ ರಾಜ್ಯ ಹೆದ್ದಾರಿಯಿಂದ ಮತ್ತು ಪಶ್ಚಿಮಕ್ಕೆ 3.00ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗದ ಸಮೀಪದಲ್ಲಿ ಅಭಿವೃದ್ಧಿ ಬೆಳವಣಿಗೆಗಳು ಬಂದಿರುತ್ತದೆ. ಆದರೆ ದಿನಾಂಕ: 25.01.2012ರ ಸರ್ಕಾರದ ಪತ್ರ ಸಂಖ್ಯೆ: ನಅಇ/609/ಮೈಅಪ್ರಾ/2011ರಂತೆ ಮಹಾಯೋಜನೆಯನ್ನು ಪರಿಷ್ಕರಿಸುವಾಗ ಭೂ ಉಪಯೋಗ ಬದಲಾವಣೆಗೆ ಪ್ರಸ್ತಾವನೆ ಸಲ್ಲಿಸಬಾರದೆಂದು ನಿರ್ದೇಶನ ನೀಡಲಾಗಿರುವುದರಿಂದ ಅದರಂತೆ ಕ್ರಮ ಕೈಗೊಳ್ಳಬಹುದೆಂದು ಅಭಿಪ್ರಾಯ ನೀಡಿರುತ್ತಾರೆ. ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಗಿದೆ.

**ನಿರ್ಣಯ:–** ವಿಷಯ ಸಂಖ್ಯೆ 6ರ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಿತು.

**12) ವಿಷಯ ಸಂಖ್ಯೆ 12:– ಅರ್ಜಿದಾರರು ಶ್ರೀ ಟಿ.ಜಾನ್, ಶ್ರೀ ತೋಮಸ್ ಪಿ.ಜಾನ್ ಮತ್ತು ಬಿಜು ಪಿ.ಜಾನ್.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ.76/2ರಲ್ಲಿ 0.74ಎಕರೆ, 76/4ರಲ್ಲಿ 4.00ಎಕರೆ, 77ರಲ್ಲಿ 2.28ಎಕರೆ, 78/1ರಲ್ಲಿ 2.06ಎಕರೆ, 78/2ರಲ್ಲಿ 1.00ಎಕರೆ, 78/3ರಲ್ಲಿ 0.86ಎಕರೆ, 79ರಲ್ಲಿ 2.06ಎಕರೆ, 81/4ರಲ್ಲಿ 9.30ಎಕರೆ, 117/1ರಲ್ಲಿ 1.36ಎಕರೆ, 117/2ರಲ್ಲಿ 0.80ಎಕರೆ ಮತ್ತು ಸರ್ವೆ ನಂ. 121ರಲ್ಲಿ 2.84ಎಕರೆ ಒಟ್ಟು ವಿಸ್ತೀರ್ಣ 27.30ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿ ಶ್ರೀ ಟಿ.ಜಾನ್, ಶ್ರೀ ತೋಮಸ್ ಪಿ.ಜಾನ್ ಮತ್ತು ಬಿಜು ಪಿ.ಜಾನ್ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ 4.00ಮೀ ಅಗಲದ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರಿಗೆ ಊಟ–ವಸತಿ ಮತ್ತು ಸ್ಥಳೀಯರಿಗೆ ಉದ್ಯೋಗವಕಾಶ ಒದಗಿಸುವ ಸಾರ್ವಜನಿಕರ

ಹಿತದೃಷ್ಟಿಯನ್ನು ಪರಿಗಣಿಸಿ, ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವರು.

ಸದರಿ ಜಾಗವನ್ನು ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಸಂಬಂದ 4 ಆಕ್ಷೇಪಣೆ ಅರ್ಜಿಗಳು ಸ್ವೀಕೃತವಾಗಿರುತ್ತದೆ. ಅದರಲ್ಲಿ ಮುಖ್ಯವಾಗಿ ರಸ್ತೆಯ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ನಗರಸಭಾ ವ್ಯಾಪ್ತಿಯ ಹೊರಭಾಗದಲ್ಲಿದ್ದು, ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ನಿವೇಶನದ ಪೂರ್ವಕ್ಕೆ 10.00ಮೀ ಅಗಲದ ಮಡಿಕೇರಿ ಸೋಮವಾರಪೇಟೆ ರಾಜ್ಯ ಹೆದ್ದಾರಿಯಿಂದ ಮತ್ತು ಪಶ್ಚಿಮಕ್ಕೆ 3.00ಮೀ ಅಗಲದ ಮಣ್ಣಿನ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗದ ಸಮೀಪದಲ್ಲಿ ಅಭಿವೃದ್ಧಿ ಬೆಳವಣಿಗೆಗಳು ಬಂದಿರುತ್ತದೆ. ಆದರೆ ದಿನಾಂಕ: 25.01.2012ರ ಸರ್ಕಾರದ ಪತ್ರ ಸಂಖ್ಯೆ ನಅಇ/609/ಮೈಅಪ್ರಾ/2011ರಂತೆ ಮಹಾಯೋಜನೆಯನ್ನು ಪರಿಷ್ಕರಿಸುವಾಗ ಭೂ ಉಪಯೋಗ ಬದಲಾವಣೆಗೆ ಪ್ರಸ್ತಾವನೆ ಸಲ್ಲಿಸಬಾರದೆಂದು ನಿರ್ದೇಶನ ನೀಡಲಾಗಿರುವುದರಿಂದ ಅದರಂತೆ ಕ್ರಮ ಕೈಗೊಳ್ಳಬಹುದೆಂದು ಅಭಿಪ್ರಾಯ ನೀಡಿರುತ್ತಾರೆ. ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಗಿದೆ.

**ನಿರ್ಣಯ:–** ವಿಷಯ ಸಂಖ್ಯೆ 6ರ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಿತು.

**13) ವಿಷಯ ಸಂಖ್ಯೆ 13:– ಅರ್ಜಿದಾರರು ಶ್ರೀ ರವೀಂದ್ರ ರೈ, ಬಂಟರ ಸಾಂಸ್ಕೃತಿಕ ಭವನ ನಿರ್ಮಿಸಲು ಭೂ ಪರಿವರ್ತನೆಗೆ ಅಭಿಪ್ರಾಯ ಕೋರಿರುವ ಬಗ್ಗೆ.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ಬಾಡಗ ಗ್ರಾಮದ ಸರ್ವೆ ನಂ.44/6ರಲ್ಲಿನ 0.52ಎಕರೆ ಜಾಗವನ್ನು ಭಂಟರ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡುವಂತೆ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–**ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ ಪೂರ್ವದಲ್ಲಿ 7.00ಮೀ ಅಗಲದ ಟಾರ್ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದ ಸಮೀಪದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತದೆ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–**ಸದರಿ ಜಾಗವು ಪೂರ್ವದಲ್ಲಿ 7.00ಮೀ ಅಗಲದ ಟಾರ್ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಈ ಜಾಗದ ಸಮೀಪದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತದೆ. ವಲಯ ನಿಯಮಾವಳಿಗಳ ಪ್ರಕಾರ ಕೃಷಿ ವಲಯದಲ್ಲಿ ವಿಶೇಷ ಸಂಧರ್ಭದಲ್ಲಿ ಬಂಟರ ಸಾಂಸ್ಕೃತಿಕ ಭವನ (ರಿಕ್ರಿಯೇಷನಲ್ ಯ್ಯೂಸ್) ಉದ್ದೇಶಕ್ಕೆ ಅವಕಾಶವಿರುವುದರಿಂದ ಅರ್ಜಿದಾರರು ಕೋರಿರುವಂತೆ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಸಭೆಯ ಅನುಮೋದನೆಯೊಂದಿಗೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದಾಗಿದೆ. ಸಭಾ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

**ನಿರ್ಣಯ:–** ಸಾಂಸ್ಕೃತಿಕ ಭವನವನ್ನು ಮಾತ್ರ ನಿರ್ಮಿಸಲು ಷರತ್ತು ವಿಧಿಸಿ ಅನುಮೋದನೆಯನ್ನು ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದ ಅಂಗೀಕಾರ ನೀಡಲಾಯಿತು.

**14) ವಿಷಯ ಸಂಖ್ಯೆ 14:– ಅರ್ಜಿದಾರರು ಶ್ರೀ ಬಿ.ಇಬ್ರಾಹಿಂ, ಎಸ್.ಎಂ.ಉಸ್ಮಾನ್, ಶ್ರೀಮತಿ ಜುಹುರ ಮತ್ತು ನಜೀಮ್ ಪರ್ವಜ್**

ಕರ್ಣಂಗೇರಿ ಗ್ರಾಮ ಸರ್ವೆ ನಂ 466/3ರಲ್ಲಿನ 0.43ಎಕರೆ ವಿಸ್ತೀರ್ಣದ ಜಮೀಗೆ ವಸತಿ ಉದ್ದೇಶಕ್ಕೆ ಭೂ ವಿನ್ಯಾಸ ಅನುಮೋದನೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಮೀನು ಮಡಿಕೇರಿ ನಗರಸಭಾ ಬ್ಲಾಕ್ ನಂ.14ರಲ್ಲಿದ್ದು, ಅನುಮೋದಿತ ಮಹಾ ಯೋಜನೆಯಂತೆ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉಪಯೋಗದಲ್ಲಿದ್ದು, ಸರ್ಕಾರದ ಆದೇಶ ಪತ್ರ ಸಂಖ್ಯೆ:ನಅಇ/355/ಮೈಅಪ್ರಾ/2009, ದಿನಾಂಕ: 11.08.2009 ರಲ್ಲಿ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಆದೇಶವಾಗಿ ಬಂದಿರುತ್ತದೆ. ಹಾಗೂ ಮಾನ್ಯ ಜಿಲ್ಲಾಧಿಕಾರಿಯವರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆದೇಶವಾಗಿದ್ದು, ಆರ್.ಟಿ.ಸಿ.ಯಲ್ಲಿ ಮನೆದಳವೆಂದು ನಮೂದು ಇರುತ್ತದೆ. ಪ್ರಸ್ತಾವಿತ ಜಾಗವು ವಸತಿ ಉದ್ದೇಶಕ್ಕೆ ಸೂಕ್ತವಾಗಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ನಅಇ/522/ಮೈಅಪ್ರಾ/2005, ದಿನಾಂಕ: 10.03.2006ರಂತೆ ಪಾರ್ಕ್ ಮತ್ತು ಸಿ.ಎ.ನಿವೇಶನಕ್ಕೆ ಜಾಗವನ್ನು ಕಾಯ್ದಿರಿಸುವ ಬದಲಾಗಿ ಅದಕ್ಕೆ ವಿನಾಯಿತಿ ನೀಡಿ ಇದಕ್ಕೆ ಬದಲಾಗಿ ಉಪನೋಂದನಾಧಿಕಾರಿಯವರು ನಿಗಧಿಪಡಿಸಿದ ನಿವೇಶನದ ನೋಂದಾವಣಿ ದರದಂತೆ ಅರ್ಜಿದಾರರಿಂದ ಶುಲ್ಕವನ್ನು ಪಾವತಿಸಿಕೊಂಡು ನಿವೇಶನಗಳನ್ನು ಭೂ ಮಾಲೀಕರಿಗೆ ವಾಪಾಸು ಬಿಟ್ಟುಕೊಟ್ಟು ವಸತಿ ವಿನ್ಯಾಸ ಅನುಮೋದನೆ ನೀಡಲು ಅವಕಾಶವಿರುತ್ತದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಈ ಮೇಲಿನ ವಿನ್ಯಾಸವನ್ನು ಅನುಮೋದಿಸುವಾಗ ಸರ್ಕಾರದ ಆದೇಶದಂತೆ ಉಪನೋಂದಣಾಧಿಕಾರಿಯವರು ನಿಗಧಿಪಡಿಸಿದ ನೋಂದಣಿ ಶುಲ್ಕವನ್ನು ಪಾವತಿಸಿಕೊಂಡು ಪಾರ್ಕ್ ಮತ್ತು ಸಿ.ಎ.ನಿವೇಶನಕ್ಕೆ ವಿನಾಯಿತಿ ನೀಡಿ, ಸದರಿ ನಿವೇಶನಗಳನ್ನು ಭೂ ಮಾಲೀಕರಿಗೆ ಬಿಟ್ಟು ಕೊಡಬಹುದೆಂದು ಸಭೆಯಲ್ಲಿ ಅಭಿಪ್ರಾಯ ನೀಡಿದ್ದರೂ, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯರವರು ವಿರೋಧ ವ್ಯಕ್ತಪಡಿಸುತ್ತಾ, ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ನೀಡಿ ಶುಲ್ಕ ಪಾವತಿಸಿಕೊಳ್ಳುವ ಬದಲು ಪಾರ್ಕ್ ಮತ್ತು ಸಿ.ಎ.ನಿವೇಶನಕ್ಕೆಂದೇ ಜಾಗ ಕಾಯ್ದಿರಿಸಿ, ವಸತಿ ವಿನ್ಯಾಸ ಅನುಮೋದಿಸಬಹುದೆಂದು ಅಭಿಪ್ರಾಯ ನೀಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ವಿರೋಧವನ್ನು ವ್ಯಕ್ತಪಡಿಸಿ 1.00ಎಕರೆ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ಪ್ರದೇಶಕ್ಕೆ ಸರ್ಕಾರದ ಸುತ್ತೋಲೆಯಂತೆ ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ಜಾಗ ಕಾಯ್ದಿರಿಸುವ ಬದಲು ಜಮೀನಿನ ಭೂ ಪರಿವರ್ತಿತ ಮಾರ್ಕೆಟ್ ಬೆಲೆಯನ್ನು ಉಪನೋಂದಣಾಧಿಕಾರಿಯವರು ನಿಗಧಿಪಡಿಸಿದಂತೆ ಖಾಸಗಿ ಮಾಲೀಕರಿಂದ ಭರಿಸಿಕೊಂಡು ವಸತಿ ವಿನ್ಯಾಸಕ್ಕೆ ಅನುಮತಿ ನೀಡಬಹುದೆಂದು ಅಭಿಪ್ರಾಯ ನೀಡಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>15) ವಿಷಯ ಸಂಖ್ಯೆ 15:– ಅರ್ಜಿದಾರರು ಶ್ರೀ ಬಿ.ಇಬ್ರಾಹಿಂ, ಎಸ್.ಎಂ.ಉಸ್ಮಾನ್, ಶ್ರೀಮತಿ ಜುಹುರ ಮತ್ತು ನಜೀಮ್ ಪರ್ವಜ್</u>**

ಕರ್ಣಂಗೇರಿ ಗ್ರಾಮ ಸರ್ವೆ ನಂ 466/6 0.84½ ಎಕರೆ ವಿಸ್ತೀರ್ಣದ ಜಮೀಗೆ ವಸತಿ ಉದ್ದೇಶಕ್ಕೆ ಭೂ ವಿನ್ಯಾಸ ಅನುಮೋದನೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಮೀನು ಮಡಿಕೇರಿ ನಗರಸಭಾ ಬ್ಲಾಕ್ ನಂ.14ರಲ್ಲಿದ್ದು, ಅನುಮೋದಿತ ಮಹಾ ಯೋಜನೆಯಂತೆ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉಪಯೋಗದಲ್ಲಿದ್ದು, ಸರ್ಕಾರದ ಆದೇಶ ಪತ್ರ ಸಂಖ್ಯೆ:ನಅಇ/355/ಮೈಅಪ್ರಾ/2009, ದಿನಾಂಕ: 11.08.2009 ರಲ್ಲಿ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಆದೇಶವಾಗಿ ಬಂದಿರುತ್ತದೆ. ಹಾಗೂ ಮಾನ್ಯ ಜಿಲ್ಲಾಧಿಕಾರಿಯವರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆದೇಶವಾಗಿದ್ದು, ಆರ್.ಟಿ.ಸಿ.ಯಲ್ಲಿ ಮನೆದಳವೆಂದು ನಮೂದು ಇರುತ್ತದೆ. ಪ್ರಸ್ತಾವಿತ ಜಾಗವು ವಸತಿ ಉದ್ದೇಶಕ್ಕೆ ಸೂಕ್ತವಾಗಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ನಅಇ/522/ಮೈಅಪ್ರಾ/2005, ದಿನಾಂಕ: 10.03.2006ರಂತೆ ಪಾರ್ಕ್ ಮತ್ತು ಸಿ.ಎ.ನಿವೇಶನಕ್ಕೆ ಜಾಗವನ್ನು ಕಾಯ್ದಿರಿಸುವ ಬದಲಾಗಿ ಅದಕ್ಕೆ ವಿನಾಯಿತಿ ನೀಡಿ ಇದಕ್ಕೆ ಬದಲಾಗಿ ಉಪನೋಂದಣಾಧಿಕಾರಿಯವರು ನಿಗಧಿಪಡಿಸಿದ ನಿವೇಶನದ ನೋಂದಾವಣಿ ದರದಂತೆ ಅರ್ಜಿದಾರರಿಂದ ಶುಲ್ಕವನ್ನು ಪಾವತಿಸಿಕೊಂಡು ನಿವೇಶನಗಳನ್ನು ಭೂ ಮಾಲೀಕರಿಗೆ ವಾಪಾಸು ಬಿಟ್ಟುಕೊಟ್ಟು ವಸತಿ ವಿನ್ಯಾಸ ಅನುಮೋದನೆ ನೀಡಲು ಅವಕಾಶವಿರುತ್ತದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ವಿಷಯ ಸಂಖ್ಯೆ 14ರಂತೆ ಕ್ರಮ ವಹಿಸಬಹುದೆಂದು ಸಭೆಯು ತೀರ್ಮಾನಿಸಿ, ಅಂಗೀಕಾರ ನೀಡಿತು.

## 16) ವಿಷಯ ಸಂಖ್ಯೆ 16:– ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.

**1. ಮಡಿಕೇರಿ ಸ್ಥಳೀಯಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ–1)ಗೆ ಸರ್ಕಾರದ ತಾತ್ಕಾಲಿಕ ಅನುಮೋದನೆ ಪಡೆದುಕೊಳ್ಳುವ ಬಗ್ಗೆ.**

**ಟಿಪ್ಪಣಿ:–**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಮಡಿಕೇರಿ ಸ್ಥಳೀಯಯೋಜನಾ ಪ್ರದೇಶದ ಕರಡು ಮಹಾಯೋಜನೆ (ಪರಿಷ್ಕೃತ–1) ತಯಾರಿಸಿ, ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಆದರೆ ಸರ್ಕಾರದ ಪತ್ರ ಸಂಖ್ಯೆ: ನಅಇ/265 ಮೈಅಪ್ರಾ/2011, ದಿನಾಂಕ 21.02.2012ರಲ್ಲಿ ಕೆಲವು ಅಂಶಗಳಿಗೆ ವಿವರವನ್ನು ಸಲ್ಲಿಸಲು ಕೋರಿರುತ್ತಾರೆ. ಇವುಗಳನ್ನು ಸರಿಪಡಿಸಿ, ಮಾರ್ಪಡಿತ ನಕ್ಷೆಯನ್ನು ಸಿದ್ದಪಡಿಸಿ, ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದು. ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–**ಸರ್ಕಾರದ ಪತ್ರದಂತೆ ಮಹಾಯೋಜನೆಯನ್ನು ಪರಿಷ್ಕರಿಸಿ, ಇಂದಿನ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬಹುದೆಂದು ಸಭೆಯು ಅಂಗೀಕಾರ ನೀಡಿತು.

**2. ಖಾಸಗಿ ಅಭಿಯಂತರರರಿಗೆ ನಕ್ಷೆ ತಯಾರಿಸಲು ಪ್ರಾಧಿಕಾರದಿಂದ ಪರವಾನಗಿ ನೀಡುವ ಬಗ್ಗೆ.**

**ಟಿಪ್ಪಣಿ:–**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲ ಬರುವ ವಸತಿ/ಕೈಗಾರಿಕೆ/ವಾಣಿಜ್ಯ ಮತ್ತಿತರ ಉಪಯೋಗಗಳಿಗಾಗಿ ಕಟ್ಟಡ/ವಿನ್ಯಾಸಗಳಿಗೆ ನಕ್ಷೆಗಳನ್ನು ತಯಾರಿಸುವಾಗ ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಲಯನಿಯಾಮಾವಳಿಗಳನ್ನು ಪಾಲಿಸಬೇಕಾಗಿರುತ್ತದೆ. ಖಾಸಗಿ ಅಭಿಯಂತರರು ಸಾರ್ವಜನಿಕರಿಗೆ ನಕ್ಷೆಗಳನ್ನು ತಯಾರಿಸುವಾಗ ಪ್ರಾಧಿಕಾರದಿಂದ ಪರವಾನಗಿಯನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಪ್ರಾಧಿಕಾರದಿಂದ ಪರವಾನಗಿಯನ್ನು ನೀಡಲು ಖಾಸಗಿ ಅಭಿಯಂತರರಿಂದ ವಾರ್ಷಿಕ ಪರವಾನಿಗೆ ಶುಲ್ಕ ರೂ.2000/–ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ಪರವಾನಗಿಯನ್ನು ನೀಡಬಹುದಾಗಿರುತ್ತದೆ. ಹಾಗೂ ಈ ಪರವಾನಗಿಯನ್ನು ಪ್ರತೀ ವರ್ಷ ನವೀಕರಿಸಿಕೊಳ್ಳಬೇಕಾಗಿರುತ್ತದೆ. ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಖಾಸಗಿ ಅಭಿಯಂತರರಿಂದ ರೂ.2,000/–ಗಳನ್ನು ಪ್ರಾಧಿಕಾರಕ್ಕೆ ಭರಿಸಿಕೊಂಡು, ನಕ್ಷೆಗಳನ್ನು ತಯಾರಿಸಲು ಪರವಾನಿಗೆಯನ್ನು ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3. ಪ್ರಾಧಿಕಾರಕ್ಕೆ ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿರುವ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ಗ್ರೂಪ್ ನೌಕರರುಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.**

**ಟಿಪ್ಪಣಿ:–**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹೊರಗುತ್ತಿಗೆ ಮೂಲಕ 2010–11ನೇ ಸಾಲಿನಲ್ಲಿ ನೇಮಿಸಿಕೊಂಡಿರುವ 1 ಕಂಪ್ಯೂಟರ್ ಆಪರೇಟರ್ ಮತ್ತು 1 'ಡಿ'ಗ್ರೂಪ್ ನೌಕರರುಗಳ ಸೇವೆಯನ್ನು 2011–12ನೇ ಸಾಲಿಗೂ ಮುಂದುವರಿಸಲಾಗಿರುತ್ತದೆ. ಹಾಗೂ ಇವರುಗಳ ಸೇವೆಯನ್ನು ಮುಂದುವರೆಸಿಕೊಂಡು ಹೋಗಲು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

**4. ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸುವಾಗ ಪತ್ರಿಕಾ ಪ್ರಕಟಣೆ ಶುಲ್ಕ 5,000/– ರಿಂದ 10,000/–ಕ್ಕೆ ನಿಗಧಿಪಡಿಸುವ ಬಗ್ಗೆ.**

**ಟಿಪ್ಪಣಿ:**–ಭೂ ಉಪಯೋಗ ಬದಲಾವಣೆಗೆ ಕೋರಿ ಸಲ್ಲಿಸುವ ಅರ್ಜಿಗಳ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ14(ಎ) ರನ್ವಯ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಿ, ಒಂದು ಪತ್ರಿಕೆಯಲ್ಲಿ ಪ್ರಕಟಣೆಯನ್ನು ನೀಡಿ ಪ್ರಚುರ ಪಡಿಸಲಾಗುತ್ತಿತ್ತು. ಆದರೆ

ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ನಗ್ರಾಯೋ/ಜಂ.ನಿ/ಸುತ್ತೋಲೆ/2011-12, ದಿನಾಂಕ:25.01.2012ರಲ್ಲಿ ಭೂ ಉಪಯೋಗ ಬದಲಾವಣೆಗೆ ಪ್ರಸ್ತಾವನೆಯನ್ನು ಸಲ್ಲಿಸುವಾಗ 2ಸ್ಥಳೀಯ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆಯನ್ನು ನೀಡಲು ಸೂಚಿಸಿರುವುದರಿಂದ ಅದರಂತೆ ಕ್ರಮ ವಹಿಸಲು ರೂ.5,000/- ಕಡಿಮೆಯಾಗಿರುವುದರಿಂದ ಇದನ್ನು ಪರಿಷ್ಕರಿಸಿ, ಅರ್ಜಿದಾರರಿಂದ ರೂ.10,000/-ವನ್ನು ಪಾವತಿಸಿಕೊಳ್ಳಬಹುದಾಗಿರುತ್ತದೆ. ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ಸಹಿ/-**
**(ಶ್ರೀ ಪಿ.ಸಜಿಲ್ ಕೃಷ್ಣ)**
**ಅಧ್ಯಕ್ಷರು ,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/-**
**(ಶ್ರೀ ಅಶಾದ್ ಉರ್ ರೆಹೆಮಾನ್ ಷರೀಫ್)**
**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**